**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ**

**ಕೆ.ಆರ್.ನಗರ**

**ಸಿ ಮಿಸ್ 60/2023**

ಪಿ ಡಬ್ಲ್ಯೂ-1

**ದಿನಾಂಕ 23-11-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**
**ಪಾಟೀ ಸವಾಲು ಶ್ರೀ ಎಮ್ ಸಿ ಎಸ್ ಎದುರುದಾರರ ಪರ ವಕೀಲರುಃ**

ನಾನು ಪ್ರಥಮ ವರ್ಷದ ಬಿ. ಕಾಂ ನ್ನು ಮಾಡಿರುತ್ತೇನೆ. ನಾನು ಪ್ರಥಮ ಪಿ ಯುಸಿಯ ಆಧಾರದ ಮೇಲೆ ಕೆಲಸಕ್ಕೆ ಹೋಗಬಹುದು ಎಂದರೆ ಸರಿಯಲ್ಲ. ಸಾಕ್ಷಿ ಯಾವುದೇ ಕೆಲಸ ಸಿಗುವುದಿಲ್ಲ ಎಂದು ತಿಳಿಸಿರುತ್ತಾರೆ. ನಾನು ಎದುರುದಾರರಿಗೆ 3 ಲಕ್ಷ ರೂಪಾಯಿಯನ್ನುನಗದು ರೂಪದಲ್ಲಿ ನೀಡಿದ್ದು ಅದಕ್ಕೆ ದಾಖಲೆ ಇಲ್ಲ ಚಿನ್ನ, ಬೆಳ್ಳಿ ಮತ್ತು ಕಲ್ಯಾಣ ಮಂಟಪದ ರಸೀದಿ ಇದೆ.

**2.** ಒಡವೆಗಳನ್ನು ನನಗೆ ನಮ್ಮ ತಂದೆ-ತಾಯಿಗಳು ಮಾಡಿಸಿಕೊಟ್ಟಿರುತ್ತಾರೆ. ಸಾಕ್ಷಿ ಮುಂದುವರೆದು ನನಗೆ 200 ಗ್ರಾಂ ಚಿನ್ನ ಹಾಗೂ ಎದುರುದಾರರಿಗೆ 200 ಗ್ರಾಂ ಚಿನ್ನವನ್ನು ಕೊಟ್ಟಿರುತ್ತಾರೆ. ರಸೀದಿಗಳುನನ್ನ ಹೆಸರಿನಲ್ಲಿವೆ. 400 ಗ್ರಾಂ ಚಿನ್ನಕ್ಕೂ ನನ್ನ ಬಳಿ ರಸೀದಿ ಇದೆ. 1 ಕೆ ಜಿ ಬೆಳ್ಳಿ ಆಭರಣಗಳಿಗೂ ಸಹ ನನ್ನ ಬಳಿ ರಸೀದಿ ಇದೆ ಅದನ್ನು ನ್ಯಾಯಾಲಯಕ್ಕೆ ನೀಡಿರುತ್ತೇನೆ.

**3.** ಚಿನ್ನ ಮತ್ತು ಬೆಳ್ಳಿಯ ರಸೀದಿಗಳು ಇರುವ ಕುರಿತು ನ್ಯಾಯಾಲಯಕ್ಕೆ ದಾಖಲೆಗಳನ್ನು ನೀಡಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ದಾಖಲೆಗಳನ್ನು ನೀಡುವುದಾಗಿ ತಿಳಿಸಿರುತ್ತಾರೆ. ಎದುರುದಾರರಿಗೆ 3 ಲಕ್ಷ ನಗದು, ಚಿನ್ನ, ಬೆಳಿ ಹಾಗೂ ಮದುವೆಯ ಸಂಪೂರ್ಣ ಖರ್ಚು ಒಟ್ಟು 10 ಲಕ್ಷ ಖರ್ಚಾಗಿರುತ್ತದೆ ಅದಕ್ಕೆ ದಾಖಲೆಗಳು ಇವೆ. ಎದುರುದಾರರು ಅವರ ತಂದೆ-ತಾಯಿಯ ಮಾತನ್ನು ಕೇಳಿ ಸಣ್ಣಪುಟ್ಟ ವಿಚಾರಕ್ಕೆ ಹಲ್ಲೆ ಮಾಡಿದ್ದಾರಿಗಿ ನನ್ನ ಅರ್ಜಿಯಲ್ಲಿ ತಿಳಿಸಿದ್ದು ಸದರಿ ಹಲ್ಲೆಯ ಕುರಿತು ನಾನು ಯಾವುದೇ ದೂರನ್ನು ಕೊಟ್ಟಿಲ್ಲ.

**4**. ನಾನು ಎದುರುದಾರರು ಇಂದಲ್ಲ ನಾಳೆ ಸರಿ ಹೋಗಬಹುದು ಎಂದು ಯಾವುದೇ ದೂರನ್ನು ಕೊಟ್ಟಿರುವುದಿಲ್ಲ. ನನಗೆ ಎದುರುದಾರರು ಹಲ್ಲೆ ಮಾಡಿರುವ ಕುರಿತು ಯಾವುದೇ ವೈದ್ಯಕೀಯ ಪ್ರಮಾಣ ಪತ್ರಗಳು ಇರುವುದಿಲ್ಲ. ಸಾಕ್ಷಿ ಮುಂದುವರೆದು ಎದುರುದಾರರು ನನ್ನನ್ನು ಯಾವುದೇ ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿರಲಿಲ್ಲ ಎಂದು ತಿಳಿಸಿರುತ್ತಾರೆ.

**5.** ಎದುರುದಾರರು ನಮ್ಮ ತವರು ಮನೆಯಿಂದ ನಿವೇಶನ ಮತ್ತು ಜಮೀನನ್ನು ಬರೆಸಿಕೊಂಡು ಬಾ ಎಂದು ಮತ್ತು ನಮ್ಮ ತವರು ಮನೇಯಿಂದ ಹಣವನ್ನು ತೆಗೆದುಕೊಂಡು ಬಾ ಎಂದು ಮಾನಸಿಕವಾಗಿ ಮತ್ತು ದೈಹಿಕವಾಗಿ ಹಿಂಸೆಯನ್ನು ನೀವುವುದಾಗಿ ಅರ್ಜಿಯಲ್ಲಿ ತಿಳಿಸಿದ್ದು ಯಾವುದೇ ದೂರನ್ನು ಕೊಟ್ಟಿರುವುದಿಲ್ಲ.

**6**. ಎದುರುದಾರರು ನನ್ನನ್ನು ಗಂಡನ ಮನೆಗೆ ಕರೆದುಕೊಂಡು ಹೋಗುತ್ತಿಲ್ಲ ಎಂದು ನಾನು ಯಾವುದೇ ದೂರನ್ನು ಕೊಟ್ಟಿರುವುದಿಲ್ಲ. ಎದುರುದಾರರು ಒಟ್ಟು 3 ಜನ ಮಕ್ಕಳು. ಎದುರುದಾರರು ಒಬ್ಬನೇ ಮಗ ಎಂದು ಅರ್ಜಿಯಲ್ಲಿ ತಿಳಿಸಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಅರ್ಜಿಯಲ್ಲಿನ ಎಲ್ಲಾ ವಿಷಯಗಳನ್ನು ತಿಳಿದುಕೊಂಡಿದ್ದೇನೆ. ಅರ್ಜಿಯ ಪ್ಯಾರಾ 7 ರಲ್ಲಿ ಒಬ್ಬನೇ ಮಗ ಎಂದು ನಮೂದಾಗಿದ್ದು ಅದು ಗಣಕಯಂತ್ರದ ತಪ್ಪಿನಿಂದ ಆ ರೀತಿ ನಮೂದಾಗಿರುತ್ತದೆ. ಆದರೆ ಎದುರುದಾರರು ಮೂರು ಜನ ಮಕ್ಕಳು.

ಈ ಹಂತದಲ್ಲಿ ಎದುರುದಾರರ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶವನ್ನು ಕೋರಿದ್ದರಿಂದ ಕಾಲಾವಕಾಶವನ್ನು ನೀಡಲಾಯಿತು.

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇದೆ ಎಂ

**(ಚಂದನ್.ಎಸ್)**
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ